ರೋಗಿ: ಡಾಕ್ಟ್ರೆ, ನನ್ನನ್ನು ಉಳಿಸಿ ಹತ್ತು ವರ್ಷದ ಹಿಂದೆ ನಾನೊಂದು ಬಂಗಾರದ ನಾಣ್ಯ ನುಂಗಿದ್ದೆ!

ಡಾಕ್ಟ್ರು: ಆಗ್ಲೆ ಯಾಕೆ ಚಿಕಿತ್ಸೆ ಮಾಡಿಸಿಕೊಳ್ಳಲಿಲ್ಲ.

ರೋಗಿ: ಆದ್ರೆ ಆಗ ನನಗೆ ಹಣದ ಅವಶ್ಯಕತೆ ಇರಲಿಲ್ಲ?

★★★

ಪ್ರವಾಸ ಪ್ರಿಯಳಾದ ಹೆಂಡತಿ ಗಂಡನಿಗೆ ಪುಸ್ತಕ ಕೊಡುತ್ತಾ ಹೇಳಿದಳು. 'ನಾವು ಎಲ್ಲೆಲ್ಲಿಗೆ ಪ್ರವಾಸಕ್ಕೆ ರಜೆಯಲ್ಲಿ ಹೋಗಬಹುದೆಂಬುದನ್ನು ಈ ಪುಸ್ತಕ ತಿಳಿಸುತ್ತದೆ.'

'ನಾವು ಎಲ್ಲಿಗೂ ಹೋಗಬಾರದೆಂದು ಈ ಪಾಸ್‌ಬುಕ್ ಹೇಳುತ್ತಿದೆ' ಎಂದ ಗಂಡ.

★★★

ಕೆಲಸಕ್ಕೆ ಸೇರಿದ ವ್ಯಕ್ತಿಯೊಬ್ಬ ಹಾಲು ಮಾರುವಾತನಲ್ಲಿ ತನ್ನ ಅನುಮಾನ ವ್ಯಕ್ತಪಡಿಸಿದ.

ಮೊದಲು ಪಾತ್ರೆಗೆ ನೀರು ಹಾಕಿ ಆ ನಂತರ ಹಾಲನ್ನು ಏಕೆ ಹಾಕಬೇಕು?

ಹಾಲಿನವ: ಆಗ ನಾವು ಆತ್ಮ ಸಾಕ್ಷಿಯಾಗಿ ನಿಜ ಹೇಳಬಹುದು 'ಹಾಲಿಗೆ ನೀರು ಹಾಕಿಲ್ಲಾ ಅಂತ.'

★★★

ನ್ಯಾಯಾಧೀಶ: ನೀನು ಕಳ್ಳತನ ಮಾಡಿಲ್ಲಾ ಅನ್ನುವುದಕ್ಕೆ ಏನಾದರೂ ಸಾಕ್ಷಿ ಇದೆಯಾ?

ಕಳ್ಳ: ಇಲ್ಲ ಪ್ರಭು, ನಾನು ಕಳ್ಳತನ ಮಾಡಲು ಹೋಗುವಾಗ ಹಿಂದೆ ಯಾರನ್ನೂ ಕರೆದೊಯ್ಯುವುದಿಲ್ಲ!

★★★



ಒಂದು ಪಟ್ಟಣದ ಮುಖ್ಯ ಬೀದಿಯಲ್ಲಿ ದೊಡ್ಡ ಬೋರ್ಡಿನ ಮೇಲೆ ಪ್ರಕಟನೆ ಇತ್ತು.

'....ಈ ಪತ್ರಿಕೆಯನ್ನು ದೇಶದಲ್ಲಿ ನೂರಕ್ಕೆ ತೊಂಬತ್ತರಷ್ಟು ಜನರು ಓದುತ್ತಾರೆ'

ಅದರ ಕೆಳಗೆ ಒಬ್ಬ ಕಿಲಾಡಿ ಬರೆದು ಹೋಗಿದ್ದ 'ಉಳಿದ ಹತ್ತರಷ್ಟು ಜನ ಮಾತ್ರ ಕೊಂಡುಕೊಳ್ಳುತ್ತಾರೆ'

**(ಸಂಗ್ರಹ) ಮಹಾಂತೇಶ. ಎಸ್. ಪಾಟೀಲ, ಹುನಗುಂದ**

ಗುಂಡ: ನಮ್ಮ ಪಕ್ಕದ ಮನೆಯವ್ರ ಹೆಂಡ್ತಿ ಕಾಣೆಯಾಗಿ ವಾರದ ಮೇಲಾಯ್ತು ಸಾರ್!

ಪೊಲೀಸ್ ಇನ್‌ಸ್ಪೆಕ್ಟರ್: ಆಕೆ ಕಡೆಯವರ್‍ಯಾರೂ ದೂರು ಕೊಟ್ಟಿಲ್ಲ, ನಿಮಗೇನ್ರಿ ಪ್ರಾಬ್ಲಮ್?

ಗುಂಡ: ಪ್ರತಿ ದಿನ ಸೆಲಬ್ರೇಟ್ ಮಾಡ್ತಿದ್ದಾನೆ, ಹೊಟ್ಟೆ ಉರಿಯುತ್ತೆ!

★★★

ಗುಂಡನ ಪತ್ನಿ: ಟೆಸ್ಟ್ ಆಗಿ 2 ದಿನ ಆಯ್ತು. ನಾಳೆ ರಿಪೋರ್ಟ್ ಬರುತ್ತಂತೆ. ನಮ್ಮ ಪುಟ್ಟ ನಿನ್ನೆ ರಾತ್ರೆಯೆಲ್ಲಾ ಅದೇನು ಬರ್‍ಕೋತಿದ್ನೊ?

ಗುಂಡ: ಫೇಲಾದ್ರೆ ಹೇಳೋಕೆ, ಕುಂಟು ನೆಪಗಳ ಪಟ್ಟಿ ಮಾಡುತ್ತಿದ್ದ ಅನ್ಸುತ್ತೆ.

**(ಸಂಗ್ರಹ) ಹಾಡ್ಯ ಬ. ಜಯಾನಂದ, ಮೈಸೂರು**



ಗೆಳೆಯ: ಲೋ ಗುಂಡ, ಯಾರೋ ಅವನು ನಿನ್ನನ್ನು ಮೂರ್ಖ, ಪೆದ್ದ ನನ್ಮಗ, ಮುಠ್ಠಾಳ ಅಂತ ಬೈಯ್ಯುತ್ತಿದ್ದರೂ ಸುಮ್ಮನೆ ಯೋಚಿಸುತ್ತ ನಿಂತಿದ್ದೀಯಲ್ಲ ಯಾಕೆ?

ಗುಂಡ: ಹಾಗಲ್ಲ. ಅವನಿಗೆ ನಿಜ ಸಂಗತಿ ಹೇಗೆ ಗೊತ್ತಾಯಿತು ಅಂತ ಯೋಚಿಸುತ್ತಿದ್ದೇನೆ

★★★

ರೋಗಿ: ನೀವು ಬರೆದುಕೊಟ್ಟ ಎಲ್ಲಾ ಮಾತ್ರೆಗಳು ಸಿಕ್ಕಿವೆ. ಆದರೆ ಚೀಟಿಯ ಹಿಂದೆ ಬರೆದಿದ್ದ ಮಾತ್ರೆಗಳು ಮಾತ್ರಾ ಸಿಗಲಿಲ್ಲ. ಏನು ಮಾಡಲಿ?

ವೈದ್ಯ: ಚಿಂತಿಸ ಬೇಡಿ! ಅದು ಮಾತ್ರೆಗಳ ಹೆಸರು ಅಲ್ಲ! ಪೆನ್ನು ಸರಿಯಾಗಿ ಬರೆಯಲಿಲ್ಲಾಂತ ಸುಮ್ಮನೆ ಗೀಚಿದ್ದೆ ಅಷ್ಟೆ.

★★★

ಹೆಂಡತಿ: ರೀ ನಾನು ನನ್ನ ತವರು ಮನೆಗೆ ಹೋಗಿದ್ದಾಗ ನಿಮಗೆ ತುಂಬಾ ಬೇಸರವಾಗಿರಬೇಕು ಅಲ್ವಾ?

ಗುಂಡ: ಛೆ! ಛೆ! ಹಾಗೇನೂ ಇಲ್ಲ. ಅಡುಗೆಯವಳು ಇದ್ದಳಲ್ಲ!

★★★

ರಾಣಿ: ರೀ ರಾಧಮ್ಮ ನಿಮ್ಮೆಜಮಾನರು ದಿನಾ ಲಾಲ್‌ಬಾಗ್‌ನಲ್ಲಿ ವಾಕಿಂಗ್ ಮಾಡ್ತಾರೆ! ಆದರೂ ಸಣ್ಣ ಆಗಿಲ್ಲವಲ್ಲ ಯಾಕೆ?

ರಾಧಮ್ಮ: ವಾಪಸ್ ಬರ್ತಾ ಹೊಟ್ಟೆ ಬಿರಿವಂತೆ ತಿಂಡಿ ತಿಂದ್ಕೊಂಡು ಬರ್‍ತಾರೆ!

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**